ಮಾತಾಡುವುದು ಸಾಧ್ಯವಾಗುತ್ತಿತ್ತು. ಇತ್ತೀಚೆಗೆ ಏನು ಓದಿದ್ದಿ, ಯಾರು ಚೆನ್ನಾಗಿ ಬರೆಯುತ್ತಿರುವ ಬರಹಗಾರರು ಎನ್ನುವ ಪ್ರಶ್ನೆಗಳನ್ನು ಅವರು ಪ್ರತಿ ಭೇಟಿಯಲ್ಲಿ ತಪ್ಪದೇ ಕೇಳುತ್ತಿದ್ದರು. ಅವರ ಮಟ್ಟಿಗೆ ವಯಸ್ಸು ಒಂದು ಸಂಖ್ಯೆಯಷ್ಟೇ ಎಂದು ಬಹಳ ಸಲ ನನಗೆ ಅನ್ನಿಸಿದೆ.

ಅವರಿಗೆ ಅರವತ್ತು ವರ್ಷ ತುಂಬಿದಾಗ ಅವರ ಶಿಷ್ಯರು, ಅಭಿಮಾನಿಗಳು ಸೇರಿ ದೊಡ್ಡ ಪ್ರಮಾಣದ ಸನ್ಮಾನ ಮಾಡಿದರು. ಅಷ್ಟೇ ದೊಡ್ಡ ಪ್ರಮಾಣದ ನಿಧಿಯನ್ನೂ ಸಮರ್ಪಣೆ ಮಾಡಿದರು. ಆದರೆ, ಜಿ.ವಿಯವರು ಅದನ್ನು ಸ್ವೀಕರಿಸಲು ಒಪ್ಪಲೇ ಇಲ್ಲ. ಸಾರ್ವಜನಿಕ ಹಣವನ್ನು ವೈಯಕ್ತಿಕ ಕಾರಣಗಳಿಗೆ ಬಳಸಲಾರೆ ಎಂಬುದು ಅವರ ಸ್ಪಷ್ಟ ನಿಲುವು. ಅಭಿಮಾನಿಗಳು ಕೂಡ ನೀವು ಸ್ವೀಕರಿಸಲೇಬೇಕು ಎಂದು ಪಟ್ಟು ಹಿಡಿದರು. ಈ ಹಗ್ಗ ಜಗ್ಗಾಟ ಕೆಲ ಕಾಲ ನಡೆಯಿತು. ಕೊನೆಗೆ ಜಿ.ವಿಯವರೇ ಒಂದು ರಾಜಮಾರ್ಗ ಕಂಡು ಹಿಡಿದರು. ಆ ಹಣವನ್ನು ಸ್ವೀಕರಿಸಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಅಲಂಕಾರಶಾಸ್ತ್ರ ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಶಾಸನಶಾಸ್ತ್ರದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಕೊಡಲು ಅದನ್ನು ಮೂಲ ನಿಧಿಯಾಗಿ ಇಟ್ಟರು. ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಅವರ ಪತ್ನಿ ಲಕ್ಷ್ಮಿಯವರ ಹೆಸರಿನಲ್ಲಿ ಆಧುನಿಕ ಕವಿಗಳ ಪರಿಚಯಕ್ಕೆ ದತ್ತಿನಿಧಿಯಾಗಿ ಬಳಸಲು ಇಟ್ಟರು. ಕೆರೆಯ ನೀರನು ಕೆರೆಗೆ ಚೆಲ್ಲಿ ಎನ್ನುವ ಮಾತನ್ನು ಅವರು ಸ್ವತಃ ಸಾಧಿಸಿ ತೋರಿಸಿದ್ದರು.

## ಮೌಲ್ಯಗಳ ಪರಂಪರೆ

ಜಿ. ವೆಂಕಟಸುಬ್ಬಯ್ಯನವರ ಹೆಸರಿನಲ್ಲಿ ಇರುವ 'ಜಿ' ಶ್ರೀರಂಗ ಪಟ್ಟಣದ ಬಳಿ ಇರುವ 'ಗಂಜಾಂ'ಅನ್ನು ಸೂಚಿಸುತ್ತಾದರೂ ಅವರು ಹುಟ್ಟಿದ್ದು ಅಲ್ಲಲ್ಲ. 23 ಆಗಸ್ಟ್ 1913ರಂದು ಅವರು ಜನಿಸಿದ್ದು ತಾಯಿಯ ತವರು ಮನೆಯಾದ ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆ ಬಳಿಯ ಕೈಗೊಹಳ್ಳಿಯಲ್ಲಿ. ವೆಂಕಟಸುಬ್ಬಯ್ಯನವರ ಪೂರ್ವಿಕರು ಕೂಡ ಬಹಳ ವರ್ಷಗಳಿಂದ ಗಂಜಾಂನಲ್ಲಿ ಇದ್ದವರಲ್ಲ. ಅವರ ಪೂರ್ವಿಕರ ಊರು ಮುದಗಂದೂರಿ. 1876ರಲ್ಲಿ ಮೈಸೂರು ಪ್ರಾಂತ್ಯದಲ್ಲಿ ತೀವ್ರ ಕ್ಷಾಮ ತಲೆದೋರಿತು. ಆಗ ವೆಂಕಟಸುಬ್ಬಯ್ಯನವರ ತಾತ ನರಸಿಂಹ ಜೋಯಿಸರು ಜೀವನೋಪಾಯಕ್ಕಾಗಿ ಗಂಜಾಂಗೆ ಬಂದು ನೆಲೆಸಿದರು. ಅವರು ಪಾಂಡಿತ್ಯ ಮತ್ತು ಅಧ್ಯಾಪನ ಎರಡರಲ್ಲಿಯೂ ಗಟ್ಟಿಗರೆನಿಸಿಕೊಂಡಿದ್ದರು. ಅವರ ಇಬ್ಬರು ಗಂಡು ಮಕ್ಕಳಲ್ಲಿ ಹಿರಿಯರಾದ ತಿಮ್ಮಣ್ಣಯ್ಯನವರು ವೆಂಕಟಸುಬ್ಬಯ್ಯನವರ ತಂದೆ. ಅವರು ಅರಮನೆ ಪಂಡಿತರು ಎನ್ನಿಸಿಕೊಂಡಿದ್ದರು. ಅರಮನೆಯ ವಿದ್ವದ್ಗೋಷ್ಠಿಗಳಿಗೆ ಅವರಿಗೆ ತಪ್ಪದೆ ಆಹ್ವಾನ ಇರುತ್ತಿತ್ತು. ವೇದೋಪನಿಷತ್‌ಗಳಲ್ಲಿ ಅವರಿಗೆ ಆಳವಾದ ಜ್ಞಾನವಿತ್ತು. ಇದರ ಜೊತೆಗೆ ಪುರಾಣಗಳಲ್ಲಿ ಕೂಡ ಅಪಾರ ಆಸಕ್ತಿ. ಸ್ವಂತ ಖರ್ಚಿನಲ್ಲಿ 'ಪುರಾಣ ಕಥಾವಳಿ' ಎನ್ನುವ ಮಾಸ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸುತ್ತಿದ್ದರು. 'ಮಾಲತಿ ಮಾಧವ' ಎನ್ನುವ ನಾಟಕವನ್ನು ಅನುವಾದ ಮಾಡಿದ್ದಲ್ಲದೆ, 'ರಘುವೀರ ಚರಿತ್ರೆ' ಎನ್ನುವ ನಾಟಕವನ್ನು ರಚನೆ ಮಾಡಿದ್ದರು. ಹೀಗಾಗಿ ವೆಂಕಟಸುಬ್ಬಯ್ಯನವರಿಗೆ ಓದಿನ ಕುರಿತು ಆಸಕ್ತಿ ಹುಟ್ಟಿತು. ಅದು ಕೊನೆಯವರೆಗೂ ನಿರಂತರವಾಗಿ ನಡೆದು ಬಂದಿತು ಕೂಡ. ತಂದೆಗೆ ಮಗನ ಕುರಿತು ಅಪಾರವಾದ ಹೆಮ್ಮೆ. ಜಿ.ವಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾದಾಗ, 'ನನ್ನ ಮಗ ಸರಸ್ವತಿ ಮಂದಿರದ ಕಾರ್ಯದರ್ಶಿ' ಎಂದು ಎಲ್ಲರ ಬಳಿ ಹೆಮ್ಮೆಯಿಂದ ಹೇಳಿಕೊಂಡು ಬಂದಿದ್ದರು. ಜಿ.ವಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗ ನೋಡಿ ಸಂತೋಷಪಡಲು ಅವರು ಇರಲಿಲ್ಲ. ಜಿ.ವಿಯವರದು ದೊಡ್ಡ ಕುಟುಂಬ. ಒಂಬತ್ತು ಜನ ಮಕ್ಕಳೇ ಇದ್ದರು. ಇದರ ಜೊತೆಗೆ ಬಂಧು ಬಾಂಧವರು. ಅವರ ತಂದೆ ಕೊನೆಯವರೆಗೂ ದಕ್ಷತೆಯಿಂದ ಸಂಸಾರವನ್ನು ನಿರ್ವಹಣೆ